ಶ್ರೀ ಎಚ್. ಕೆ. ಶಿವರುದ್ರಪ್ಪನವರು.—ಇಲ್ಲಿ ಹೇಳಿರುವ ಕೆರೆಗಳೇ ಅಲ್ಲದೆ ಬೇರೆ ಯಾವುದಾದರೂ ರಿಪೇರಿಯಾಗದಿರುವ ಕೆರೆಗಳಿಲ್ಲವೇ?

Sri Kadidal MANJAPPA.—It is evident.

ಶ್ರೀ ಎಚ್. ಕೆ. ಶಿವರುದ್ರಪ್ಪನವರು.—1924ನೆಯ ಇಸವಿಯಿಂದ 1951ನೆಯ ಇಸವಿಯವರೆಗೆ 16 ಕೆರೆಗಳನ್ನು ಮಾತ್ರ ರಿಪೇರಿ ಮಾಡಿದ್ದೀರಿ. ಇದೇ ರೀತಿ ಹೋದರೆ ಇನ್ನೆಷ್ಟು ವರ್ಷಕ್ಕೆ ಪೂರ್ತಿಯಾಗಿ ಎಲ್ಲಾ ಕೆರೆಗಳೂ ರಿಪೇರಿಯಾಗುವುದು?

Mr. SPEAKER.—The Hon'ble Minister need not answer that question. It is too general.

ಶ್ರೀ ಎಚ್. ಕೆ. ಶಿವರುದ್ರಪ್ಪನವರು.—1952-53ನೆಯ ವರ್ಷದಲ್ಲಿ ಈ ತಾಲ್ಲೂಕಿನಲ್ಲಿ ಯಾವುದಾದರೂ ಕೆರೆಗಳ ರಿಪೇರಿ ಬಗ್ಗೆ ಬಡ್ಜೆಟ್ಟಿನಲ್ಲಿ ಹಣವನ್ನೊದಗಿಸಿದ್ದೀರಾ?

ಶ್ರೀ ಕಡಿದಾಳ್ ಮಂಜಪ್ಪನವರು.—ಬಡ್ಜೆಟ್ಟನ್ನು ನೋಡಿದರೆ ತಮಗೇ ಗೊತ್ತಾಗುತ್ತದೆ.

ಶ್ರೀ ಎಚ್. ಕೆ. ಶಿವರುದ್ರಪ್ಪನವರು.—ಬಡ್ಜೆಟ್ಟಿನಲ್ಲಿ ನಮೂದಿಸಿಲ್ಲ; ಅದಕ್ಕೇ ನಾನು ಕೇಳುತ್ತಿರುವುದು, ಈ ತಾಲ್ಲೂಕಿಗೆ ಹಣ ಕೊಡಲು ಅವಕಾಶವಿದೆಯೇ ಎಂದು.

ಶ್ರೀ ಕಡಿದಾಳ್ ಮಂಜಪ್ಪನವರು.—ನೋಟೀಸ್ ಬೇಕು.

ಶ್ರೀ ಎಚ್. ಕೆ. ಶಿವರುದ್ರಪ್ಪನವರು.—ಈ ತಾಲ್ಲೂಕಿನಲ್ಲಿ ಯಾವ ನಾಲಾ ಜಲಾಶಯಗಳ ಆಶ್ರಯವೂ ಇಲ್ಲದಿರುವುದರಿಂದ ಈ ಕೆರೆಗಳನ್ನು ರಿಪೇರಿ ಮಾಡಿಸಿಕೊಡುವುದು ಆವಶ್ಯಕವಲ್ಲವೇ?

ಶ್ರೀ ಕಡಿದಾಳ್ ಮಂಜಪ್ಪನವರು.—ಹೌದು, ಆವಶ್ಯಕ.

ಶ್ರೀ ಎಚ್. ಕೆ. ಶಿವರುದ್ರಪ್ಪನವರು.—ಹಾಗಾದರೆ ಈ ಸಲವೇನಾದರೂ ಹಣ ಒದಗಿಸುತ್ತೀರಾ?

ಶ್ರೀ ಕಡಿದಾಳ್ ಮಂಜಪ್ಪನವರು.—ಸಾಧ್ಯವಾದಷ್ಟುಮಟ್ಟಿಗೆ ಕೊಡುತ್ತೇವೆ.

ಶ್ರೀ ಜಿ. ಎ. ತಿಮ್ಮಪ್ಪಗೌಡರು (ತರಕಲಗೂಡು).—ಸರ್ಕಾರದವರು ಮೈನರ್ ಕೆರೆಗಳ ರಿಪೇರಿಯನ್ನಾಗಲಿ, ಹೊಸದಾಗಿ ರಿಸರ್ವಾಯರ್‌ಗಳನ್ನು ಕಟ್ಟಿಸುವುದನ್ನಾಗಲಿ, ಮಾಡುವಾಗ ಅವುಗಳಿಗಾಗುವ ಖರ್ಚು ಮತ್ತು ಬರತಕ್ಕ ಉತ್ಪತ್ತಿ ಎರಡನ್ನೂ ಹೋಲಿಕೆ ಮಾಡುತ್ತಾರೆಯೆ?

Sri Kadidal MANJAPPA.—That supplementary does not arise out of this question.

Harnessing the waters of Mayur River.

Q.—352 Sri H. K. SHIVARUDRAPPA (Gundlupet-Heggaddevankote).—

Will the Government be pleased to state.—

(*a*) Whether it has come to their notice that the Madras Government are using the waters of Mayur River which rightly belong to us;

(*b*) if so, the steps taken by them in the matter;

(*c*) whether they have investigated the possibilities or otherwise of harnessing it for irrigation purposes or for generating power to the benefit of the taluk?

A.—Sri Kadidal MANJAPPA (Minister for Revenue and Public Works).—

(*a*) The Mayur River forms the common boundary between Mysore and Madras for a length of 16 miles at the South of Gundlupet and Chamarajanagar Taluks. Half the flow in the river along this length belongs to Mysore. The Madras Government have diverted the flow in the river in their territory for generation of power at Mayur Station situated on the opposite bank of the river at a site 7 miles below the commencement of the common boundary.

(*b*) Mayur Hydro-Electic Works were recently visited by the Members of the Technical Advisory Committee deputed by this Government on 20th April 1952, and on their recommendation it has been proposed to jointly gauge the stream at several points to ascertain the flow in the Mayur stream and the portion of flow diverted by Madras Government for generation of power before taking further action.

(Sri KADIDAL MANJAPPA)

The whole question is now under correspondence with the Madras Government.

(*c*) No detailed investigations have been made.

ಶ್ರೀ ಎಚ್. ಕೆ. ಶಿವರುದ್ರಪ್ಪನವರು.—ಈ ಮಾಯೂರು ನದಿಯ ನೀರನ್ನು ಮದ್ರಾಸ್ ಸರ್ಕಾರದವರು ಯಾವಾಗಿನಿಂದ ಉಪಯೋಗಿಸುತ್ತಿದ್ದಾರೆ?

Sri Kadidal MANJAPPA.—I cannot give you the date.

ಶ್ರೀ ಎಚ್. ಕೆ. ಶಿವರುದ್ರಪ್ಪನವರು.—ಆ ರೀತಿಯಾಗಿ ಅವರು ನೀರನ್ನು ತೆಗೆದುಕೊಂಡಿದ್ದು ಸರ್ಕಾರದವರ ಗಮನಕ್ಕೆ ಯಾವಾಗ ಬಂತು?

ಶ್ರೀ ಕಡಿದಾಳ್ ಮಂಜಪ್ಪನವರು.—ನೀರನ್ನು ತೆಗೆದುಕೊಂಡನಂತರ ಬಂತು.

ಶ್ರೀ ಎಚ್. ಕೆ. ಶಿವರುದ್ರಪ್ಪನವರು.—ಯಾವಾಗ?

Sri Kadidal MANJAPPA.—As I said, I cannot give the date.

ಶ್ರೀ ಎಚ್. ಕೆ. ಶಿವರುದ್ರಪ್ಪನವರು.—ಮದ್ರಾಸ್ ಸರ್ಕಾರದವರು ಹೀಗೆ ನೀರು ತೆಗೆದುಕೊಳ್ಳುತ್ತಿರುವುದರಿಂದ ಅವರಿಂದ ನಮಗೇನಾದರೂ ಪರಿಹಾರ ಬರುತ್ತಿದೆಯೇ?

Sri Kadidal MANJAPPA.—The whole question is under correspondence.

Anicut across the Kapila River near Bidarhally.

Q.—355 **Sri H. K. SHIVARUDRAPPA** (Gundlupet-Heggaddevankote).—

Will the Government be pleased to state :—

(*a*) whether an estimate has been prepared to construct an anicut across the Kapila River near Bidarhally in Heggaddevankote Taluk; and if so, the amount of the estimate;

(*b*) the object with which this anicut is proposed to be constructed;

(*c*) whether there is any possibility of supplying water from this anicut to Gundlupet Taluk if it is constructed?

A.— **Sri Kadidal MANJAPPA** (Minister for Revenue and Public Works).—

(*a*) Yes, for the construction of a composite dam at a rough cost of Rs. 250 lakhs.

(*b*) (i) To assure supplies needed for power generation at Sivasamudram.

(ii) To irrigate 6,000 acres of fresh land.

(iii) To extend irrigation under the Visvesvaraya Canal area from the storage thus released *vide* (i) above from the Krishnarajasagara.

(*c*) The topography of the country does not admit of water supply from this storage for irrigation in Gundlupet Taluk.

ಶ್ರೀ ಎಚ್. ಕೆ. ಶಿವರುದ್ರಪ್ಪನವರು.—ಇಲ್ಲಿ ಉತ್ತರದಲ್ಲಿ ಈ ಅಣೆಕಟ್ಟನ್ನು ನಿರ್ಮಿಸುವ ಉದ್ದೇಶದ ಬಗ್ಗೆ ಎರಡು ಮೂರು ವಿಷಯಗಳನ್ನು ಹೇಳಿದ್ದೀರಿ. ಗುಂಡ್ಲುಪೇಟೆಗೆ ನೀರನ್ನೊದಗಿಸಬೇಕೆಂಬ ಉದ್ದೇಶದಿಂದ ಇದನ್ನು ಮಾಡಿದ್ದೀರಲ್ಲವೇ?

ಶ್ರೀ ಕಡಿದಾಳ್ ಮಂಜಪ್ಪನವರು.—ಗುಂಡ್ಲುಪೇಟೆ ಎತ್ತರವಾದ ಪ್ರದೇಶದಲ್ಲಿದೆ, ಆದ್ದರಿಂದ ಅಲ್ಲಿಗೆ ನೀರನ್ನು ಹತ್ತಿಸುವುದಕ್ಕಾಗುವುದಿಲ್ಲ.

ಶ್ರೀ ಎಚ್. ಕೆ. ಶಿವರುದ್ರಪ್ಪನವರು.—ಈ ಅಂಶವನ್ನು ಪರಿಶೀಲನೆಮಾಡಿ ಈ ಅಭಿಪ್ರಾಯಕ್ಕೆ ಬಂದಿದ್ದೀರಾ?

Mr. SPEAKER.—They have said that in the answer to (b).

ಶ್ರೀ ಎಚ್. ಕೆ. ಶಿವರುದ್ರಪ್ಪನವರು.—ಹಾಗಾದರೆ ಈ ಪರಿಶೀಲನೆಯನ್ನು ಯಾವಾಗ ಕೈಕೊಂಡಿರಿ?

Mr. SPEAKER.—That does not arise.

ಶ್ರೀ ಎಂ. ಲಿಂಗಣ್ಣನವರು (ನಂಜನಗೂಡು).—ಇದರಿಂದ 6,000 ಎಕರೆಗಳು ಇರಿಗೇಟ್ ಆಗುತ್ತವೆಂದು ಹೇಳಿದ್ದೀರಲ್ಲಾ, ಇದು ಯಾವ ತಾಲ್ಲೂಕಿನಲ್ಲಿ?

ಶ್ರೀ ಕಡಿದಾಳ್ ಮಂಜಪ್ಪನವರು.—ನೋಟೀಸ್ ಬೇಕು.